ಚುಟುಕು ಸುದ್ದಿ

ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ ಕಾರ್ಯಕ್ರಮ

ಉದಯಕಾಲ ನ್ಯೂಸ್ ಯಶವಂತಪುರ: ಬೆಂಗಳೂರಿನ ಮೈಸೂರು ರಸ್ತೆಯಲ್ಲಿರುವ ಡಾನ್ ಬಾಸ್ಕೋ ತಾಂತ್ರಿಕ ಮಹಾವಿದ್ಯಾಲಯದಲ್ಲಿ ದೇಶದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಕನಸಿನ ಕೂಸು ''ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ -2024 ತಂತ್ರಾಂಶ ಆವಿಷ್ಕಾರ ಕಾರ್ಯಕ್ರಮ ನಡೆಯಿತು.

ಏಳನೇ ಗ್ರಾಂಡ್ ಫಿನಾಲೆ ರಾಷ್ಟ್ರವ್ಯಾಪಿ 17 ವಿಷಯಗಳ ಕುರಿತು 51 ನೊಡೆಲ್ ಸೆಂಟ್ರಲ್‌ನಲ್ಲಿ ಏಕಕಾಲದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮವನ್ನು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಉದ್ಘಾಟನೆ ಮಾಡಿದರು. ಡಾನ್ ಬಾಸ್ಕೋ ತಾಂತ್ರಿಕ ವಿದ್ಯಾಲಯದಲ್ಲಿ ಕಾಲೇಜು ಮಟ್ಟದಲ್ಲಿ ಎಐಸಿಟಿಇ ನಿರ್ದೇಶಕ ನರೇಶ್ ಕುಮಾರ್ ಗ್ರೋವರ್ ಉದ್ಘಾಟನೆ ಮಾಡಿದರು.

ಪ್ರಾಂಶುಪಾಲ ಡಾ.ಬಿ.ಎಸ್.ನಾಗಭೂಷಣ್ ಮಾತನಾಡಿ, ಡಾನ್ ಬಾಸ್ಕೋ ಕಾಲೇಜಿನಲ್ಲಿ ಹಲವು ಇಲಾಖೆಯ ಸಮಸ್ಯೆಗಳನ್ನು ಪಟ್ಟಿ ಮಾಡಿ ಈ ಸಮಸ್ಯೆಗಳಿಗೆ ಪರಿಹಾರ ಹುಡುಕಿಕೊಡುವ ಹಾಗೂ ವಿದ್ಯಾರ್ಥಿಗಳಲ್ಲಿ ತಾಂತ್ರಿಕ ಕ್ಷಮತೆ, ಜ್ಞಾನ ಶಕ್ತಿಯನ್ನು ಹೆಚ್ಚಿಸುವ ಸಲುವಾಗಿ ಮತ್ತು ಅವರಿಂದಲೇ ಸಮಸ್ಯೆಗಳಿಗೆ ಉತ್ತರ ಹುಡುಕುವ ಮೂಲಕ ಅವರು ಉದ್ಯಮಿಗಳಾಗಿ ಅಥವಾ ಸಂಶೋಧಕರಾಗಿ ರೂಪುಗೊಳ್ಳುವ ಅವಕಾಶ ಕಲ್ಪಿಸಲಾಗಿದೆ ಎಂದರು.

ಎಐಸಿಟಿಇ ನಿರ್ದೇಶಕ ನರೇಶ್ ಕುಮಾರ್ ಗ್ರೋವರ್, ನಾವೀನ್ಯತೆ ಅಧಿಕಾರಿ ಪೂಜಾ ರಾವತ್, ಐಐಸಿ ನೋಡೆಲ್ ಅಧಿಕಾರಿ ಡಿಕಿನ್ ಡ್ಯಾನಿ, ವಯನಮಾಕ್ ಸಂಸ್ಥೆಯ ಅಧ್ಯಕ್ಷ ಬೈರಪ್ಪ , ಉಪಾಧ್ಯಕ್ಷ ಬಿ.ಮಂಜುನಾಥ್, ಕಾರ್ಯದರ್ಶಿ ರಾಘವ ಬೈಲಪ್ಪ, ಡಾ. ಕೆ.ಆರ್. ನಟರಾಜ್ ಇದ್ದರು.

ವಿಶ್ವ ಮಣ್ಣಿನ ದಿನ ಪ್ರಯುಕ್ತ ಹಸಿರು ಶಿಕ್ಷಕ ಪ್ರಶಸ್ತಿ

ಉದಯಕಾಲ ನ್ಯೂಸ್ ಯಲಹಂಕ: ವಿಶ್ವ ಮಣ್ಣಿನ ದಿನದ ಪ್ರಯುಕ್ತ ಯಲಹಂಕದ ಬಿಎಂಎಸ್‌ಐಟಿ ಕಾಲೇಜಿನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಬಿಎಂಎಸ್‌ಐಟಿ ಇಕೋ ಕ್ಲಬ್, ತನ್ನ ಸಿಎಸ್‌ಆರ್‌ನ ಭಾಗವಾಗಿ ರಾಜು ಕಿಡೋರ್ ಅವರಿಗೆ ಹಸಿರು ಶಿಕ್ಷಕ ಪ್ರಶಸ್ತಿ, ಹಳೆ ವಿದ್ಯಾರ್ಥಿಗಳ ವಿಭಾಗದಲ್ಲಿ ಸಹನಾ ಎಂ. ಅವರಿಗೆ ಹಸಿರು ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ಬಿಎಂಎಸ್‌ಐಟಿ ಉಪ ಪ್ರಾಂಶುಪಾಲ ಡಾ.ಅನಿಲ್ ಜಿ.ಎನ್., ಇಕೋಕ್ಲಬ್‌ನ ಸಂಯೋಜಕ ಪ್ರೊ. ವೆಂಕಟೇಶ್ ಎ., ಮುಖ್ಯ ಸಂಪರ್ಕಾಧಿಕಾರಿ ಡಾ.ರಾಜೇಶ್ ಗೋಪಿನಾಥ್, ಇಕೋಕ್ಲಬ್ ಮಾರ್ಗದರ್ಶಕಿ ಡಾ.ಅನ್ನಮ್ಮ ಅಬ್ರಹಾಂ ಇನ್ನಿತರರಿದ್ದರು.

ರಾಜು ಕಿಡೋರ್ ಅವರು ಕಾಸರಗೋಡು ಜಿಲ್ಲೆಯ ಕುಂಬ್ಳೆ ಪಟ್ಟಣದಲ್ಲಿ ಶಾಲಾ ಶಿಕ್ಷಕರಾಗಿದ್ದು, 20ವರ್ಷಗಳಿಂದ ಪರಿಸರ ಸ್ನೇಹಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಾಸರಗೋಡು ಭಾಗದ ಇಕೋ ಕ್ಲಬ್‌ನ ಮುಖ್ಯ ಸಂಚಾಲಕರಾಗಿ ಸಹ ಸೇವೆ ಸಲ್ಲಿಸುತ್ತಿರುವ ರಾಜು ಕಿಡೋರ್ ಅವರು ವಿವಿಧ ಮಾದರಿಯ ಚಿಟ್ಟೆ ಮತ್ತು ಪಕ್ಷಿಗಳ ಸರ್ವ ಕಾರ್ಯದಲ್ಲಿ ವಿಶೇಷ ಪರಿಣಿತಿ ಹೊಂದಿದ್ದಾರೆ.

ಸಹನಾ ಎಂ.ರವರು ಬಿಎಂಎಸ್‌ಐಟಿ ಯಲ್ಲಿ ಎಲೆಕ್ಟ್ರಿಕಲ್ ವಿಭಾಗದಲ್ಲಿ ಇಂಜಿನಿಯರಿಂಗ್ ಪದವಿ ಪಡೆದಿದ್ದು, ಪ್ರಸ್ತುತ ಫಿಡೆಲಿಟಿ ಇನ್ವೆಸ್ಟ್‌ಮೆಂಟ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದರ ಜೊತೆಗೆ ಡಿಜಿಟಲ್ ಆರ್ಟ್ ಮೂಲಕ ಪರಿಸರ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದಾರೆ.

ಟೆಕ್ಕಿ ಅತುಲ್ ಆತ್ಮಹತ್ಯೆ: ಪತ್ನಿ, ಅತ್ತೆ ಸೇರಿ ನಾಲ್ವರು ವಿರುದ್ಧ ಎಫ್‌ಐಆರ್

ಉದಯಕಾಲ ನ್ಯೂಸ್ ಬೆಂಗಳೂರು: ಪತ್ನಿ ಹಾಗೂ ಮತ್ತಾಕೆಯ ಸಂಬಂಧಿಕರು ಕಿರುಕುಳ ನೀಡಿರುವ ಸಂಬಂಧ ಡೆತ್ ನೋಟ್ ಬರೆದಿಟ್ಟು ಆತ್ಮಹತ್ಯೆಗೆ ಶರಣಾದ ಸಾಫ್ಟ್‌ವೇರ್ ಉದ್ಯೋಗಿ ಅತುಲ್ ಸುಭಾಷ್ ಸಹೋದರ ಬಿಕಾಸ್ ಕುಮಾರ್ ನೀಡಿದ ದೂರಿನನ್ವಯ ಮಾರತ್ ಹಳ್ಳಿ ಪೊಲೀಸರು ಮಂಗಳವಾರ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ಅತುಲ್ ಸುಭಾಷ್ ಅವರ ಪತ್ನಿ ನಿಕಿತಾ ಸಿಂಘಾನಿಯಾ, ಆಕೆಯ ತಾಯಿ ನಿಶಾ ಸಿಂಘಾನಿಯಾ, ಸಹೋದರ ಅನುರಾಗ್ ಸಿಂಘಾನಿಯಾ ಹಾಗೂ ಸಂಬಂಧಿ ಸುಶೀಲ್ ಸಿಂಘಾನಿಯಾ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಾಯ್ದೆ 108 (ಆತ್ಮಹತ್ಯೆಗೆ ಪ್ರಚೋದನೆ) ಆರೋಪದಡಿ ಎಫ್‌ಐಆರ್ ದಾಖಲಾಗಿದೆ.

2019ರಲ್ಲಿ ಅತುಲ್ ಸುಭಾಷ್, ನಿಕಿತಾ ಸಿಂಘಾನಿಯಾಗೆ ಮದುವೆಯಾಗಿದ್ದು, ದಂಪತಿಗೆ 4 ವರ್ಷದ ಗಂಡು ಮಗುವಿದೆ. ಆದರೆ ತನ್ನ ತಾಯಿ ಹಾಗೂ ಸಹೋದರನ ಕುಮ್ಮಕ್ಕಿನಿಂದ ಪತಿ ಅತುಲ್ ಸುಭಾಷ್ ವಿರುದ್ಧ ನಿಕಿತಾ ಸುಳ್ಳು ದೂರು ದಾಖಲಿಸಿದ್ದಳು ಎಂದು ಆರೋಪಿಸಲಾಗಿದೆ. ಆರೋಪಿಗಳು ಅತುಲ್ ಸುಭಾಷ್‌ಗೆ ಪುತ್ರನ ಭೇಟಿಗೂ ಅವಕಾಶ ನೀಡದೆ 30 ಲಕ್ಷಕ್ಕೆ ಬೇಡಿಕೆಯಿಟ್ಟು ಪ್ರಕರಣದ ನ್ಯಾಯಾಲಯದ ಕಲಾಪಗಳಿಗೆ ಅತುಲ್ ಸುಭಾಷ್ ಹಾಜರಾದ ಸಂದರ್ಭದಲ್ಲಿ 3 ಕೋಟಿ ರೂ. ಕೊಡು, ಇಲ್ಲದಿದ್ದರೆ ಬದುಕಿರಬೇಡ ಎಂದು ಅಣಕಿಸುತ್ತಿದ್ದರು.

ಇದರಿಂದ ಮಾನಸಿಕ ಹಾಗೂ ದೈಹಿಕವಾಗಿ ನೊಂದು ಅತುಲ್ ಸುಭಾಷ್ ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಬಿಕಾಸ್ ಕುಮಾರ್ ತಮ್ಮ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಮೃತನ ಸಹೋದರನ ದೂರಿನನ್ವಯ ಮಾರತ್ ಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮುಂದಿನ ತನಿಖೆ ನಡೆಸಲಾಗುತ್ತಿದೆ ಎಂದು ವೈಟ್ ಫೀಲ್ಡ್ ವಿಭಾಗದ ಡಿಸಿಪಿ ಡಾ. ಶಿವಕುಮಾರ್ ಗುಣಾರೆ ತಿಳಿಸಿದರು.

ಉತ್ತರ ಪ್ರದೇಶ ಮೂಲದ ಅತುಲ್ ಸುಭಾಷ್ (34) ಡಿ.9ರಂದು ಮಾರತ್ ಹಳ್ಳಿಯ ಮಂಜುನಾಥ ಲೇಔಟ್‌ನಲ್ಲಿರುವ ತಮ್ಮ ಮನೆಯಲ್ಲಿ ಆತ್ಮಹತ್ಯೆಗೆ ಶರಣಾಗಿದ್ದರು. ಸುಮಾರು 40 ಪುಟಗಳ ಡೆತ್ ನೋಟ್ ಬರೆದಿಟ್ಟು, ಸಾವಿನ ಬಳಿಕ ಮೃತದೇಹ ಗಮನಿಸುವವರಿಗೆ ವ್ಯವಸ್ಥಿತವಾಗಿ ಸೂಚನೆಗಳನ್ನು ನೀಡಿ ಆತ್ಮಹತ್ಯೆಗೆ ಶರಣಾಗಿರುವುದು ಕಂಡುಬಂದಿತ್ತು.

ಮಗನಿಗೆ ಗಿಫ್ಟ್ ಬಾಕ್ಸ್: ಗಿಫ್ಟ್ ಬಾಕ್ಸ್‌ಅನ್ನು ಮನೆಯಲ್ಲಿಟ್ಟು, ತನ್ನ ನಾಲ್ಕು ವರ್ಷದ ಪುತ್ರನಿಗೆ ತಲುಪಿಸುವಂತೆ ಉಲ್ಲೇಖಿಸಿದ್ದರು. ನಂತರ JUSTICE IS DUE ಎಂಬ ಬರಹವಿರುವ ಪೋಸ್ಟರ್, ಹಾಗೂ ಪೂರ್ಣಗೊಳಿಸಿರುವ ತನ್ನ ಕೆಲಸಗಳ ಪಟ್ಟಿಯನ್ನು ಗೋಡೆಗೆ ಅಂಟಿಸಿ ಅತುಲ್ ಸುಭಾಷ್ ತನ್ನ ಬದುಕಿಗೆ ಕೊನೆಹಾಡಿದ್ದರು.

ತನ್ನ ಪತ್ನಿ ನಿಖಿತಾ ಹಾಗೂ ಆಕೆಯ ಕುಟುಂಬದವರು ಚಿತ್ರಹಿಂಸೆ ನೀಡುತ್ತಿದ್ದರು, ನನ್ನದೇನೂ ತಪ್ಪಿಲ್ಲದಿದ್ದರೂ ತನ್ನ ಮೇಲೆ 9 ಪ್ರಕರಣಗಳನ್ನು ದಾಖಲಿಸಿದ್ದರು. ಆರು ಪ್ರಕರಣಗಳು ಕೆಳ ನ್ಯಾಯಾಲಯದಲ್ಲಿದ್ದರೆ ಮೂರು ಪ್ರಕರಣಗಳು ಹೈಕೋರ್ಟ್‌ನಲ್ಲಿವೆ. ಒಂದು ಬಾರಿ ಒಂದು ಪ್ರಕರಣವನ್ನು ವಾಪಸ್ ಪಡೆದಿದ್ದಳು ಆದರೆ ಕೊನೆಗೆ ಅದರ ಬದಲು ಮತ್ತೊಂದು ಪ್ರಕರಣವನ್ನು ದಾಖಲಿಸಿದ್ದಳು ಎನ್ನುವ ವಿಚಾರವನ್ನು ಅವರು ಬರೆದಿದ್ದಾರೆ.

ಶವ ನೋಡುವುದೂ ಬೇಡ: ತನ್ನ ಮಗನನ್ನು ಪೋಷಕರಿಗೆ ಒಪ್ಪಿಸಲು ಕೇಳಿಕೊಂಡಿದ್ದು, ಯಾವುದೇ ಕಾರಣಕ್ಕೂ ತನ್ನ ಪತ್ನಿ ಹಾಗೂ ಆಕೆಯ ಮನೆಯವರು ತನ್ನ ಶವವನ್ನೂ ನೋಡಬಾರದು ಎಂದು ಬರೆದಿದ್ದಾರೆ.

ಚರಂಡಿಗೆ ಎಸೆಯಬೇಕು: ನ್ಯಾಯ ಸಿಗುವವರೆಗೂ ಚಿತಾಭಸ್ಮ ನೀರಿನಲ್ಲಿ ಬಿಡಬೇಡಿ ತನಗೆ ನ್ಯಾಯ ಸಿಗುವವರೆಗೂ ಅವರ ಚಿತಾಭಸ್ಮವನ್ನು ನೀರಿನಲ್ಲಿ ಬಿಡುವುದು ಬೇಡ ಎಂದು ಸುಭಾಷ್ ಬರೆದಿದ್ದರು. ನ್ಯಾಯ ಕೊಡಲು ಸಾಧ್ಯವಾಗದಿದ್ದರೆ ನನ್ನ ಚಿತಾಭಸ್ಮವನ್ನು ನ್ಯಾಯಾಲಯದ ಮುಂದೆ ಚರಂಡಿಗೆ ಎಸೆಯಬೇಕು, ಈ ದೇಶದಲ್ಲಿ ಮನುಷ್ಯನ ಜೀವನವು ಗಟಾರವಾಗಿದೆ ಎಂದು ನೋವು ತೋಡಿಕೊಂಡಿದ್ದರು.

ಕನ್ನಡೇತರರಿಗೆ ಕನ್ನಡ ಕಲಿಸಿ: ಸಂತೋಷ್ ಹೆಗಡೆ

ಉದಯಕಾಲ ನ್ಯೂಸ್ ಆನೇಕಲ್: ಕನ್ನಡಿಗರು ಧಾರಾಳವಂತರು ಹಾಗೂ ಸಹಿಷ್ಣುತೆಯನ್ನು ರೂಢಿಸಿಕೊಂಡವರು. ಕನ್ನಡೇತರರಿಗೆ ನಮ್ಮ ಭಾಷೆಯನ್ನು ಅಕ್ಕರೆಯಿಂದ ಕಲಿಸಿ ಹೃದಯ ವೈಶಾಲ್ಯ ಮೆರೆಯಬೇಕೆಂದು ನ್ಯಾಯಧೀಶ ಸಂತೋಷ್ ಹೆಗಡೆ ತಿಳಿಸಿದರು.

ಅವರು ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದ ಸನ್ಸೆರ ಕಾರ್ಖಾನೆಯಲ್ಲಿ ಕಾರ್ಮಿಕ ಬಳಗ ನಡೆಸಿದ ಕನ್ನಡ ರಾಜ್ಯೋತ್ಸವದಲ್ಲಿ ಮಾತನಾಡಿ, ಯುವ ಜನತೆ ಪ್ರಾಮಾಣಿಕತೆಯಿಂದ ದುಡಿದು ಸರಳ ಜೀವನ ನಡೆಸುವುದನ್ನು ರೂಢಿಸಿಕೊಳ್ಳಬೇಕು. ಆರೋಗ್ಯವಂತ ಸಮಾಜ ನಿರ್ಮಾಣ ನಮ್ಮೆಲರ ಜವಾಬ್ದಾರಿಯಾಗಿದ್ದು, ಲೋಭ, ಮತ್ಸರವನ್ನು ನಿಯಂತ್ರಿಸಿ ಇತರರಿಗೆ ಮಾದರಿಯಾಗಬೇಕು. ಒಪ್ಪಿಕೊಂಡ ಕಾರ್ಯವನ್ನು ನಿಷ್ಠೆಯಿಂದ ಮಾಡಿದಲ್ಲಿ ಮಹದಾನಂದ ಸಿಗುತ್ತದೆ ಎಂದರು.



ಸಂನ್ಸೇರಾದ ಜಂಟಿ ನಿರ್ದೇಶಕ ಎಫ್.ಆರ್. ಸಿಂಘ್ವಿ ಮಾತನಾಡಿ, ಸಿಎಸ್‌ಆರ್ ನಿಧಿಯಲ್ಲಿ ತಾಲೂಕಿನ ವಿವಿಧ ಶಾಲೆಗಳನ್ನು ದತ್ತು ಪಡೆದು ಅಭಿವೃದ್ಧಿಪಡಿಸಲಾಗಿದೆ. ಶೈಕ್ಷಣಿಕ ಪ್ರೋತ್ಸಾಹ ಕಾರ್ಯಕ್ರಮದಡಿ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಗುರುತಿಸಿ ಗೌರವಿಸಲಾಗಿದೆ ಎಂದರು.

ಟಿ.ಪಿ. ಮಧುಸೂದನ್, ಗುರಪ್ಪ ನಾಯ್ಡು, ಮನೋಹರ್, ವಿಜಯೇಂದ್ರ, ಜೇನುಗೂಡು ಮಹೇಶ್ ಊಗಿನಹಳ್ಳಿ, ತ್ರಿವರ್ಮ ಇತರರಿದ್ದರು.

ನಂದಗುಡಿ ಹೋಬಳಿ ತಾವರೆಕೆರೆ ಗ್ರಾಮದಲ್ಲಿ ರಾಸುಗಳಿಗೆ ಚರ್ಮಗಂಟು ಸೋಂಕು ರೋಗ ಲಸಿಕೆ ಹಾಕುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಪಶು ವೈದ್ಯಕೀಯ ಪರೀಕ್ಷಕ ಆರ್.ರೇಣುಕುಮಾರ್ ರಾಸುಗಳಿಗೆ ಲಸಿಕೆ ಹಾಕಿದರು.

ವ್ಯಸನ ಮುಕ್ತ ಸಮಾಜದಿಂದ ಆರೋಗ್ಯಯುತ ದೇಶ ನಿರ್ಮಾಣ

ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮದಲ್ಲಿ ರಂಗಕಲಾವಿದ ನಟರಾಜ್ ಎಂಎನ್‌ಆರ್ ಹೇಳಿಕೆ

ಉದಯಕಾಲ ನ್ಯೂಸ್ ತಾವರೆಕೆರೆ: ಸುಭದ್ರ ಹಾಗೂ ಆರೋಗ್ಯಯುತ ದೇಶ ನಿರ್ಮಾಣವಾಗಬೇಕಾದರೆ ವ್ಯಸನ ಮುಕ್ತ ಸಮಾಜದಿಂದ ಮಾತ್ರ ಸಾಧ್ಯ ಎಂದು ರಂಗಕಲಾವಿದ ನಟರಾಜ್ ಎಂಎನ್‌ಆರ್ ತಿಳಿಸಿದರು.

ನಂದಗುಡಿಯ ಅರುಣೋದಯ ಪದವಿಪೂರ್ವ ಕಾಲೇಜಿನಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಹಮ್ಮಿಕೊಂಡಿದ್ದ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ ಹಾಗೂ ಮಾದಕ ವ್ಯಸನಗಳ ದುಷ್ಪರಿಣಾಮಗಳ ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದರು.

ಹದಿಹರೆಯದ ವಯಸ್ಸಿನಲ್ಲಿ ಆಕರ್ಷಣೆ ಮತ್ತು ಪ್ರೇರಣೆಯಿಂದ ದುಶ್ಚಟಗಳಿಗೆ ಬಿದ್ದು ತಮ್ಮ ಜೀವನ ಹಾಳು ಮಾಡಿಕೊಳ್ಳುವುದು ಹೆಚ್ಚಾಗುತ್ತಿದೆ. ಆದ್ದರಿಂದ ಮೂಲದಲ್ಲಿಯೇ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಧರ್ಮಸ್ಥಳ ಸಂಸ್ಥೆಯು ಪ್ರೌಢಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಮೂಲಕ ಮಾದಕ ವ್ಯಸನಗಳ ದುಷ್ಪರಿಣಾಮಗಳನ್ನು ತಿಳಿಸಿ ವ್ಯಸನಕ್ಕೆ ಬೀಳುವುದನ್ನು ತಪ್ಪಿಸುವುದಲ್ಲದೆ ಇತರರಿಗೂ ಅರಿವು ಮೂಡಿಸುತ್ತಿದೆ ಎಂದರು.

ಬೀಡಿ, ಸಿಗರೇಟು, ಗಾಂಜಾ, ಡ್ರಗ್, ಅಫೀಮು ಸೇರಿದಂತೆ ಇನ್ನಿತರ ವಸ್ತುಗಳ ಸೇವನೆಯಿಂದ ಆರ್ಥಿಕವಾಗಿ ದುರ್ಬಲರಾಗುವುದಲ್ಲದೆ ಆರೋಗ್ಯ ಹಾಳಾಗಿ ಸಮಾಜದಲ್ಲಿ ಗೌರವವೂ ಕಡಿಮೆಯಾಗಿ ಕೊನೆಗೆ ಸಾವು ಸಂಭವಿಸುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಇದರ ಅರಿವು ಪಡೆದು ಇತರರಿಗೂ ಅರಿವು ಮೂಡಿಸಿ ಸಮಾಜದ ಸ್ವಾಸ್ಥ್ಯವನ್ನು ಕಾಪಾಡಬೇಕು ಎಂದರು.

ಅರುಣೋದಯ ಕಾಲೇಜಿನ ಪ್ರಾಂಶುಪಾಲ ಶ್ರೀನಾಥ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಪ್ರತಿಯೊಂದು ಆಹಾರ ಪದಾರ್ಥಗಳು ಕೂಡ ಕಲಬರಕೆಯಾಗಿದ್ದು, ಜನರ ಸರಾಸರಿ ಬದುಕುವ ಆಯಸ್ಸು ಕ್ಷೀಣಿಸುತ್ತಿದ್ದು ದೈಹಿಕ ಬಲಹೀನತ್ವ ಕೂಡ ಉಂಟಾಗಿದೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ಮಾದಕ ವಸ್ತುಗಳ ಸೇವನೆಗಿಳಿದರೆ ದುಡಿಯುವ ಪ್ರಮಾಣ ಕಡಿಮೆಯಾಗಿ ದೇಶದ ಪ್ರಗತಿಗೆ ಕುಂದುಂಟಾಗುತ್ತದೆ ಎಂದರು.

ಆರಕ್ಷಕ ಸಿಬ್ಬಂದಿಯಾದ ಎತುಮ್ ಭಾಷಾ ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ಕಾನೂನು ಮತ್ತು ಸಂಚಾರಿ ನಿಯಮಗಳ ಮಾಹಿತಿ ನೀಡಿದರು.

ಭಾರತೀಯ ಸ್ಟೇಟ್ ಬ್ಯಾಂಕ್

ಹೋಮ್ ಲೋನ್ ಸೆಂಟರ್, ಶಂಕರಾಪುರಂ – 64063
ನಂ. 13/1, ಕನಕಾಸ್ ಪ್ರೈಡ್, ಬುಲ್ ಟೆಂಪಲ್ ರಸ್ತೆ, ರಾಮಕೃಷ್ಣ ಮಠದ ಎದುರು, ಶಂಕರಾಪುಂಜ, ಬೆಂಗಳೂರು–560004.
ದೂರವಾಣಿ : (080) 28411010, ಇಮೇಲ್: maintracpc4.zoban1@sbi.co.in

ದಿನಾಂಕ 19.12.2024ರಂದು ಇ–ಹರಾಜು ಮಾರಾಟದ ಮೂಲಕ ವಾಹನಗಳ ಮಾರಾಟಕ್ಕಾಗಿ ಸೂಚನೆ

ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಈ ಕೆಳಗೆ ವಿವರಿಸಿರುವ ವಾಹನಗಳನ್ನು ಭಾರತೀಯ ಸ್ಟೇಟ್ ಬ್ಯಾಂಕ್, ಹೋಮ್ ಲೋನ್ ಸೆಂಟರ್, ಶಂಕರಾಪುರಂ ಇವರಿಂದ ಈ ನೋಟೀಸಿನಲ್ಲಿ ಸೂಚಿಸಿರುವ ದಿನಾಂಕ ಮತ್ತು ಸಮಯದಂದು "ಎಲ್ಲಿ ಹೇಗಿದೆಯೋ ಹಾಗೆ" ಆಧಾರದ ಮೇಲೆ ಇ–ಹರಾಜು ಮ್ಮಾರಾಟದ ಮೂಲಕ ಮಾಡಲಾಗುವುದು.

ಕ್ರ. ಸಂ.	ಸಾಲಗಾರರ ಹೆಸರು	ಲೋನ್ ಅಕೌಂಟ್ ನಂ.	ವಾಹನದ ಮಾಡೆಲ್	ನೋಂದಣಿ ಸಂಖ್ಯೆ	ಇಂಧನ	ಮೀಸಲು ಬೆಲೆ ಹರಾಜು ಮೊತ್ತ + ಜಿಎಸ್‌ಟಿ ಸೇರಿದಂತೆ ಅನ್ವಯಿಸುತ್ತದೆ (ಬೆಲೆ ರೂಗಳಲ್ಲಿ)
1	ಮುರುಗನ್ ಗೌರಿ ಶಂಕರ್	41149371380	I20 ASTA1.2 KAPPA	KA-01-MX-6826	PETROL	Rs. 7,17,120/-

ಇ–ಹರಾಜು ಮಾರಾಟದ ದಿನಾಂಕ ಮತ್ತು ಸಮಯ : 19.012.2024, ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 2.30 ಗಂಟೆಯವರೆಗೆ (ಪ್ರತಿ ಬಿಡ್‌ಗೆ 5 ನಿಮಿಷಗಳ ಅನಿಯಮಿತ ವಿಸ್ತರಣೆ). ಇಎಂಡಿ ಮೇಲೆ ಸೂಚಿಸಿರುವಂತೆ ಪ್ರತಿ ವಾಹನದ ಮೀಸಲು ಬೆಲೆಯ 10% (ಯಶಸ್ವಿಯಾಗದ ಬಿಡ್ಡರ್‌ಗಳಿಗೆ ಇಎಂಡಿ ಹಣವನ್ನು ಹಿಂದಿರುಗಿಸಲಾಗುವುದು). ಮೇಲಿನ ವಾಹನಗಳ ತಪಾಸಣೆಗಾಗಿ ಇಲ್ಲಿ ತಿಳಿಸಲಾದ ಏಜೆನ್ಸಿಯನ್ನು ಸಂಪರ್ಕಿಸಿ : ಎಸ್ ಕ್ಯಾಚ್ ವರ್ಲ್ಡ್, ರಾಜು ಸಂಪರ್ಕಿಸುವ ಸಂಖ್ಯೆ : 9844110655.

ನಿಯಮಗಳು ಮತ್ತು ನಿಬಂಧನೆಗಳು : 1. ಇ–ಹರಾಜು ಮಾರಾಟವನ್ನು ಎಲ್ಲಿ ಹೇಗಿದೆಯೋ ಹಾಗೆ ಆಧಾರದ ಮೇಲೆ ನಡೆಸಲಾಗುವುದು. ವಾಹನದ ಮೇಲೆ ಪರಿಣಾಮ ಬೀರುವ ಇತರ ಯಾವುದೇ ಸಂಗತಿಗಳಿಗೆ ಬ್ಯಾಂಕ್ ಜವಾಬ್ದಾರರಲ್ಲ. 2. ಇ–ಹರಾಜು ಮಾರಾಟವನ್ನು ದಿನಾಂಕ 19.12.2024 ರಿಂದ ಪೋರ್ಟಲ್ https:/ebkray.in ಮೂಲಕ ನಡೆಸಲಾಗುವುದು. 3. ಉದ್ದೇಶಿತ ಖರೀದಿದಾರರು / ಬಿಡ್‌ದಾರರು ebkray.in ಪೋರ್ಟಲ್‌ನಲ್ಲಿ 18.12.2024 ರಂದು ಅಥವಾ ಮೊದಲು ಇಎಂಡಿ ಮೊತ್ತವನ್ನು ಪಾವತಿಸಬೇಕಾಗುತ್ತದೆ ಮತ್ತು ನೋಂದಾಯಿಸಿಕೊಳ್ಳಬೇಕಾಗುತ್ತದೆ. 4. ಮೇಲ್ಕಂಡ ಎಲ್ಲ ವಾಹನಗಳನ್ನು ಮೇಲೆ ಸೂಚಿಸಿರುವ ಸಂಬಂಧಪಟ್ಟ ಏಜೆನ್ಸಿಯವರ ಆವರಣದಲ್ಲಿ ನಿಲ್ಲಿಸಲಾಗಿದೆ. 5. ಆಸಕ್ತ ಬಿಡ್ಡರ್‌ಗಳು ಮೇಲೆ ಸೂಚಿಸಿರುವ ಸಂಬಂಧ ಪಟ್ಟ ಸ್ಥಳಗಳಿಗೆ ಭೇಟಿ ನೀಡಿ ವಾಹನಗಳನ್ನು ಪರಿಶೀಲಿಸಬಹುದು ಮತ್ತು ಅವರ ಬೆಲೆಯನ್ನು ನೀಡಬಹುದು (